Aishwarya Chethana Degree College * Anekal - 562106 *

# I Semester B.B.A. Examination, February/March 2024
## (NEP Scheme) (F + R)
## ಕನ್ನಡ ಭಾಷಾ ಪತ್ರ
## ವ್ಯವಹಾರ ನಿರ್ವಹಣಾ ಕನ್ನಡ (ಪತ್ರಿಕೆ – 1)

Time : 2½ Hours Max. Marks : 60

I. ಈ ಕೆಳಗಿನ ಪ್ರಶ್ನೆಗಳಲ್ಲಿ 4 ಕ್ಕೆ 80 ಪದಗಳಿಗೆ ಮೀರದಂತೆ ಉತ್ತರಿಸಿ. (4×5=20)

1) ದ್ವಿಭಾಷಿತ್ವ ಎಂದರೇನು ? ಅದರಿಂದಾಗುವ ಪರಿಣಾಮಗಳೇನು ?

2) ಸ್ಮಾರ್ಟ್ ಸಹಾಯಕರನ್ನು ಪರಿಚಯಿಸಿ.

3) ಹೆಣ್ಣಿನ ತವರಿನ ಹಂಬಲದ ಸ್ವರೂಪವನ್ನು ವಿವರಿಸಿ.

4) ಕನ್ನಡ ಭಾಷೆ ಅನ್ನದ ಭಾಷೆಯಾಗಲು ಅನುಸರಿಸಬೇಕಾದ ಕ್ರಮಗಳಾವುವು ?

5) ಯಂತ್ರಚಾಲಿತ ಕೈಗಾರಿಕೆಗಳಿಂದ ಪರಿಸರಕ್ಕಾಗುತ್ತಿರುವ ಹಾನಿ ಕುರಿತು ಚರ್ಚಿಸಿ.

6) ಬ್ಯಾಂಕಿಂಗ್ ಉದ್ಯಮದ ಉನ್ನತಿಗೆ ಕಾರಣಗಳನ್ನು ತಿಳಿಸಿ.

II. ಈ ಕೆಳಗಿನ ಪ್ರಶ್ನೆಗಳಲ್ಲಿ 2 ಕ್ಕೆ 160 ಪದಗಳಿಗೆ ಮೀರದಂತೆ ಉತ್ತರಿಸಿ. (2×10=20)

1) 'ಉದಯವಾಗಲಿ ನಮ್ಮ ಚೆಲುವ ಕನ್ನಡ ನಾಡು' ಕವಿತೆಯ ಮಹತ್ವವೇನು ?

2) ವಾರೆನ್ ಬಫೆಟ್‌ನಿಂದ ಕಲಿಯಬಹುದಾದ ಪಾಠಗಳಾವುವು ? ವಿವರಿಸಿ.

3) ನೀರಿನ ಹೆಸರಿನಲ್ಲಿ ನಡೆಯುವ ಹುನ್ನಾರಗಳನ್ನು ವಿಶ್ಲೇಷಿಸಿ.

III. ಈ ಕೆಳಕಂಡ ಪತ್ಯವನ್ನು ಮೂರನೇ ಒಂದು ಭಾಗಕ್ಕೆ ಸಂಕ್ಷೇಪಿಸಿ ಬರೆದು ಸೂಕ್ತ ಶೀರ್ಷಿಕೆ ನೀಡಿ. (1×3=3)

ಹೆನ್ರಿಫೋರ್ಡ್ ಒಮ್ಮೆ ಒಬ್ಬ ಎಂಜಿನಿಯರ್‌ನನ್ನು ನಿಮ್ಮ ಜೀವನದ ಧ್ಯೇಯವೇನೆಂದು ಕೇಳಿದರು. ಆತ ತುಂಬಾ ಹಣ ಸಂಪಾದಿಸಬೇಕೆಂಬುದೇ ತನ್ನ ಏಕೈಕ ಧ್ಯೇಯವೆಂದು ಹೇಳಿದ. ಫೋರ್ಡ್ ನಸುನಕ್ಕರು. ಕೆಲವು ದಿನಗಳ ನಂತರ ಆ ಯುವಕನನ್ನು ಕರೆಸಿ ಆತನಿಗೊಂದು ಲೋಹದ ಫ್ರೇಮ್ ಇರುವ ಕನ್ನಡಕವನ್ನು ಕೊಟ್ಟು ಹಾಕಿಕೊಳ್ಳಲು ಹೇಳಿದರು. ವಿಚಿತ್ರವೆಂದರೆ ಕನ್ನಡಕದಲ್ಲಿ ಗಾಜಿನ ಬದಲು ಅಗಲವಾದ ನಾಣ್ಯಗಳು ಜೋಡಿಸಲ್ಪಟ್ಟಿದ್ದವು. ಯುವಕ ಕನ್ನಡಕ ಹಾಕಿಕೊಂಡ, ಫೋರ್ಡ್‌ರವರು ಈಗೇನು ಕಾಣುತ್ತಿದೆಯೆಂದು ಕೇಳಿದರು. ಆ ಯುವಕ 'ನಾಣ್ಯ ದೃಷ್ಟಿಯನ್ನು ಮುಚ್ಚಿಬಿಟ್ಟಿದೆ, ನನಗೇನೂ ಕಾಣಿಸುತ್ತಿಲ್ಲ' ಎಂದ. ಆಗ ಫೋರ್ಡ್ 'ಬದುಕಿನಲ್ಲೂ ಅಷ್ಟೇ ಹಣವೇ ಮುಖ್ಯ ಧ್ಯೇಯವೆಂದುಕೊಂಡರೆ ಮತ್ತೇನೂ ಕಾಣುವುದಿಲ್ಲ'

ಎಂದು ಹೇಳಿದರು. ಸ್ವಲ್ಪ ಕಕ್ಕಾಬಿಕ್ಕಿಯಾದ ಆ ಯುವಕ 'ಇಷ್ಟು ದೊಡ್ಡ ಕಾರ್ಖಾನೆಯ ಮಾಲೀಕರಾದ ನಿಮ್ಮ ಧ್ಯೇಯವೂ ಹಣ ಗಳಿಕೆಯೇ ಅಲ್ಲವೇ' ಎಂದು ಪ್ರಶ್ನಿಸಿದ. ಅವರು 'ಖಂಡಿತವಾಗಿಯೂ ಅಲ್ಲ ! ಸಾಮಾನ್ಯರಿಗೂ ಎಟುಕುವ ಬೆಲೆಯ ಕಾರು ! ಕಾರು ಮುಖ್ಯ ಉತ್ಪಾದನೆ. ಹಣ ಉಪ ಉತ್ಪಾದನೆ ! ನೀನೊಬ್ಬ ಎಂಜಿನಿಯರ್. ಉತ್ತಮ ಎಂಜಿನಿಯರಿಂಗ್ ನಿನ್ನ ಮುಖ್ಯ ಧ್ಯೇಯವಾಗಬೇಕು. ಹಣ ಬಂದೇ ಬರುತ್ತದೆ ಎಂದು ಹೇಳಿದರು. ಅಂದು ಹೆನ್ರಿಫೋರ್ಡ್ ಕಲಿಸಿದ ಬದುಕಿನ ಅಮೂಲ್ಯವಾದ ಪಾಠ ಇಂದಿಗೂ ಪ್ರಸ್ತುತ. ಕೇವಲ ಹಣ ಗಳಿಕೆಯೇ ನಮ್ಮ ಜೀವನದ ಪ್ರಮುಖ ಧ್ಯೇಯವಾದರೆ ನಮಗೂ ಬೇರೇನೂ ಕಾಣುವುದಿಲ್ಲ.

IV. ಸಂಕ್ಷೇಪಿಸಿದ ಬರಹ ಆಧರಿಸಿ ಎರಡು ಪ್ರಶ್ನೆಗಳನ್ನು ರೂಪಿಸಿ. (2×1=2)

V. ಇವುಗಳಲ್ಲಿ ಎರಡು ಪದಗಳನ್ನು ಬಳಸಿ ಸ್ವಂತ ವಾಕ್ಯ ರಚಿಸಿ. (2×1=2)

1) ಎಲುವು

2) ಚೊಕ್ಕ

3) ಪರಸ್ಥಳ

4) ಬೊಕ್ಕಸ

VI. ಪರಿಸರ ದಿನದ ಆಚರಣೆಗಾಗಿ ನಿಮ್ಮ ಕಾಲೇಜಿನ ಆವರಣದಲ್ಲಿ ಗಿಡ ನೆಡಲು ವಿವಿಧ ಬಗೆಯ ಸಸ್ಯಗಳನ್ನು ನೀಡುವಂತೆ ಕೋರಿ ವಲಯ ಅರಣ್ಯಾಧಿಕಾರಿಯವರಿಗೆ ಒಂದು ಪತ್ರ ಬರೆಯಿರಿ. (4×1=4)

VII. ಇವುಗಳಲ್ಲಿ ನಾಲ್ಕು ಪದಗಳಿಗೆ ಅರ್ಥ ಬರೆಯಿರಿ. (4×1=4)

1) ಇಸಾ

2) ಷಹರ

3) ಸೂಡು

4) ಸೊಣಗ

5) ನಕಾರಾತ್ಮಕ

6) ಕುಬಸ

VIII. ಇವುಗಳಿಗೆ ಒಂದೊಂದು ಸರಿ ಉತ್ತರವನ್ನು ಗುರುತಿಸಿ ಎಲ್ಲಾ ಪ್ರಶ್ನೆಗಳಿಗೆ ಉತ್ತರಿಸಿ. (5×1=5)

1) ಜಲನಿಧಿಯನ್ನು ಜಿಗಿದವರ್ಯ್ಯಾರು ?

ಎ) ಶಿವ  ಬಿ) ಪರಶುರಾಮ  ಸಿ) ಹನುಮಂತ  ಡಿ) ಕೃಷ್ಣ

2) ಷಹರಿನಲ್ಲಿ ಕಣ್ಣು ಹಾಯಿಸಿದ ಕಡೆ ಕಂಗೆಡಿಸುವುದೇನು ?

ಎ) ಉಕ್ಕು  ಬಿ) ಕಾಂಕ್ರೀಟು

ಸಿ) ಮರಮುಟ್ಟು, ಜೆಲ್ಲಿ  ಡಿ) ಮೇಲಿನ ಎಲ್ಲವೂ

3) ಹೃದಯದ ಶಸ್ತ್ರ ಚಿಕಿತ್ಸೆಗೆ ಬೇಕಾದ ಹಣವೆಷ್ಟು ?

ಎ) 90,000  ಬಿ) 50,000  ಸಿ) 30,000  ಡಿ) 70,000

4) ಮಂಗಳೂರಿನ ಸ್ಥಳೀಯ ಪತ್ರಿಕೆ ಯಾವುದು ?

ಎ) ಸ್ವದೇಶಾಭಿಮಾನಿ  ಬಿ) ವೃತ್ತಾಂತ ಬೋಧಿನಿ

ಸಿ) ಮಂಗಳೂರು ಸಮಾಚಾರ  ಡಿ) ತಾಯಿನಾಡು

5) ಚರಕ ಸಂಸ್ಥೆ ಮಲೆನಾಡಿನಲ್ಲಿ ಸ್ಥಾಪಿಸಿದ ಉದ್ದಿಮೆ ಯಾವುದು ?

ಎ) ಬುಟ್ಟಿ ಹೆಣೆಯುವಿಕೆ  ಬಿ) ಕುಂಬಾರಿಕೆ

ಸಿ) ಬಟ್ಟೆ ಗಿರಣಿ  ಡಿ) ಕೈಮಗ್ಗ

---